## ಪೋಸ್ಟಾಫೀಸಿನಲಿ ಅಕ್ಕನ ಜಡ್ಜಮೆಂಟು




**‘ಹಿಂಡೆಕುಳ್ಳು’** ಹಾಗೂ ‘ಬಾಂಗ್ಲಾದ ಹಕ್ಕಿಗಳು’ ಸಂಕಲನಗಳ ಮೂಲಕ ಕಥೆಗಾರರಾಗಿ ಸಹೃದಯರ ಗಮನಸೆಳೆದಿರುವ ಸಿಂಧನೂರಿನ ಅಮರೇಶ ಗಿಣಿವಾರ, ‘ಪೋಸ್ಟಾಫೀಸಿನಲಿ ಅಕ್ಕನ ಜಡ್ಜಮೆಂಟು’ ಮೂಲಕ ಪ್ರಬಂಧ ಪ್ರಕಾರದ ಸಾಧ್ಯತೆಗಳನ್ನು ಶೋಧಿಸಲು ಪ್ರಯತ್ನಿಸಿದ್ದಾರೆ.

‘ಬಸಿರಾಯಣ’, ‘ಹೆಂಡತಿ’, ‘ಕೆಂಪು ಬಸ್ಸು’, ‘ಬಾಲ್ಯ’, ‘ಅಪಾನವಾಯು ಸಿಡಿದಾಗ’ ಸೇರಿದಂತೆ ಸಂಕಲನದ ಹತ್ತು ಪ್ರಬಂಧಗಳಲ್ಲೂ ಓದುಗರ ತುಟಿಗಳಲ್ಲಿ ಮಂದಹಾಸ ಮೂಡಿಸುವ ಹಂಬಲ ಸಾಮಾನ್ಯಗುಣವಾಗಿದೆ. ಪೋಸ್ಟಾಫೀಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲೇಖಕರು, ವೃತ್ತಿಜೀವನದ ಸ್ವಾರಸ್ಯಕರ ಅನುಭವಗಳನ್ನು ಬರಹಕ್ಕೆ ತಂದಿದ್ದಾರೆ. ನೆನಪು ಹಾಗೂ ಅನುಭವಗಳ ಬರಹರೂಪದ ಸಂಯೋಜನೆಯಲ್ಲಿ ಈ ಬರಹಗಳು ಗಮನಸೆಳೆಯುತ್ತವೆ. ಪ್ರಬಂಧ ಪ್ರಕಾರದ ಸ್ವಾತಂತ್ರ್ಯವನ್ನು ಅಮರೇಶ ಸೊಗಸಾಗಿ ಬಳಸಿಕೊಂಡಿದ್ದಾರೆ.

ಕಥೆಗಾರನೊಬ್ಬ ಭಿನ್ನ ಪ್ರಕಾರದಲ್ಲಿ ತೊಡಗಿಸಿಕೊಳ್ಳುವ ದೃಷ್ಟಿಯಿಂದ ಈ ಪ್ರಬಂಧಗಳು ಗಮನಾರ್ಹ, ಸ್ವಾಗತಾರ್ಹ. ಆದರೆ, ಕಥೆಗಾರರಾಗಿ ಪಡೆದಷ್ಟು ಯಶಸ್ಸು ಪ್ರಬಂಧಕಾರರಾಗಿ ಅಮರೇಶರಿಗೆ ದೊರೆತಿಲ್ಲ. ಸ್ವಾರಸ್ಯಕರ ಸಂಗತಿಗಳನ್ನು ಪ್ರಬಂಧವಾಗಿ ನಿರೂಪಿಸುವಲ್ಲಿ ಅವರು ತೋರಿರುವ ಉತ್ಸಾಹವನ್ನು, ಆ ಸಂಯೋಜನೆಗೊಂದು ತಾತ್ವಿಕ ಭಿತ್ತಿ ದೊರಕಿಸಿಕೊಡುವಲ್ಲಿಯೂ ಉಳಿಸಿಕೊಳ್ಳಬೇಕಾಗಿದೆ.

**ಲೇ: ಅಮರೇಶ ಗಿಣಿವಾರ; ಪು: 88; ಬೆ: ₹ 120; ಪ್ರ: ಮೇಘನಾ ಪ್ರಕಾಶನ, ಸಿಂಧನೂರು. ಫೋನ್: 7338180848**

## ಒಂದು ಆದಿಮ ಪ್ರೇಮ




**ಹಾಸನ** ಜಿಲ್ಲೆಯ ಹೆದ್ದುರ್ಗದ ನಂದಿನಿ ರೈತ ಕುಟುಂಬಕ್ಕೆ ಸೇರಿದವರು. ‘ಒಂದು ಆದಿಮ ಪ್ರೇಮ’ ಅವರ ನಾಲ್ಕನೇ ಕವನಸಂಕಲನ.

‘ದೇವರಿಗೆ ಧನ್ಯವಾದಗಳು / ಜಗದ ಗಂಡುಗಳ ಎದೆಕಂಕುಳಲ್ಲಿ / ಪೊದೆ ಬೆಳಸಿ ತೊಡೆಗಂಬಗಳ / ನಡುವೆ ಘನತಿಮಿರಿನ / ಬಲಿಗಂಬ ಮೂಡಿಸಿದ್ದಕ್ಕೆ / ದೇವರಿಗೆ ಧನ್ಯವಾದಗಳು / ಬಲಿಯಾಗಲು ಇನ್ನೂ ಹೆಣ್ಣುಗಳು / ಹುಟ್ಟುತ್ತಿರುವುದಕ್ಕೆ’.

ಹೀಗೆ, ವ್ಯಂಗ್ಯ-ವಿಷಾದವನ್ನು ಬೆರೆಸಿ ಕವಿತೆ ಕಟ್ಟುವ ನಂದಿನಿ ಹೆದ್ದುರ್ಗ ಅವರ ‘ಒಂದು ಆದಿಮ ಪ್ರೇಮ’ ಸಂಕಲನದ ಕವಿತೆಗಳು, ಮೇಲ್ನೋಟಕ್ಕೆ ದಿಟ್ಟ ಅಭಿವ್ಯಕ್ತಿಗಳಂತೆ ಕಾಣಿಸಿ ಓದುಗರನ್ನು ಬೆಚ್ಚಿಬೀಳಿಸುವ ಪ್ರಯತ್ನಗಳಂತೆ ಕಾಣಿಸಿದರೂ, ಪ್ರೇಮ-ಕಾಮದ ಕುರಿತ ಕಚಗುಳಿಗಳಂತೆ ಕಂಡರೂ, ಅವುಗಳ ಆಳದಲ್ಲಿ ವಿಷಾದವೇ ಸ್ಥಾಯಿಭಾವವಾಗಿದೆ; ಆ ಕಾರಣದಿಂದಲೇ ಅವು ಸಹೃದಯರೊಳಗೆ ಬೆಳೆಯುವ ಬೀಜಗಳಾಗುತ್ತವೆ.

‘ಈ ಚಿತ್ರಕ್ಕೊಂದು ಹೆಸರು ಕೊಡಿ’ ಕವಿತೆ ಕೊನೆಗೊಳ್ಳುವುದು ಹೀಗೆ: ‘ಇನ್ನೂ ಸಿಕ್ಕದ ಹರಿದ / ಕುಪ್ಪಸಕ್ಕಾಗಿ ಜರಿದ ಸ್ತನಕ್ಕಾಗಿ / ಹೊಕ್ಕುಳದ ಸಿಕ್ಕಿಗಾಗಿ / ತೊಡೆಗಾಗಿ ಜಡೆಗಾಗಿ / ಪಾತ್ರಕ್ಕಾಗಿ ಪಾವಿತ್ರ್ಯಕ್ಕಾಗಿ / ಪ್ರಾಮಾಣಿ‘ಕತೆ’ಗಾಗಿ ನೈತಿ‘ಕತೆ’ಗಾಗಿ / ವಿಶೇಷಕ್ಕಾಗಿ ಅಶೇಷಕ್ಕಾಗಿ’ ಮಂದಿ ಹುಡುಕುತ್ತಿದ್ದಾರೆ’. ‘ಆಡಬೇಡಿ’ ಕವಿತೆ ಆರಂಭಗೊಳ್ಳುವುದು ಹೀಗೆ: ‘ಸುರಿವ ಮಳೆಯನ್ನು ಬೆಳೆಯೆನ್ನುವೆ / ಅಲ್ಲವೆನ್ನಬೇಡಿ / ಹರಿವ ನದಿಯನ್ನು ಜೀವವೆನ್ನುವೆ / ನಗೆಯಾಡಬೇಡಿ / ಮಣ್ಣನ್ನು ಮಗುವೆನ್ನುವೆ / ದಯಮಾಡಿ ತೆಗಳಬೇಡಿ’. ಈ ತುಣುಕುಗಳು ಕವಿಯಾಗಿ ನಂದಿನಿ ಅವರ ಭಿನ್ನ ಸಾಧ್ಯತೆಗಳನ್ನು ಸೂಚಿಸುವಂತಿವೆ.

**ಲೇ: ನಂದಿನಿ ಹೆದ್ದುರ್ಗ; ಪು: 132; ಬೆ: ₹ 150; ಪ್ರ: ವೀರಲೋಕ, ಬೆಂಗಳೂರು. ಫೋನ್: 7022122121.**